(ಇಂದು ದಿನಾಂಕಃ **07-01-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು ಶ್ರೀ ಆರ್ ಎಂ ಆರ್ ವಕೀಲರಿಂದಃ**

ನಾನು ಪದವಿ ವ್ಯಾಸಾಂಗ ಮಾಡಿರುತ್ತೇನೆ. ಚೆನ್ನಬಸಪ್ಪ ರವರು ಅಣ್ಣಿಗೇರಿಗೆ ಬರುತ್ತಿದ್ದರಿಂದ ನನಗೆ ಅವರ ಪರಿಚಯವಿರುತ್ತದೆ. ಸದರಿಯವರು ಈಗ ಮೃತಪಟ್ಟಿರುತ್ತಾರೆ. ಜಮೀನು ಸರ್ವೆ ನಂಃ 898/4 ರ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಸದರಿ ಜಮೀನು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿಯವರು ಕ್ಯಾನ್ಸರ್ ಕಾಯಿಲೆ ಮೃತಪಟ್ಟಿರುತ್ತಾರೆ. ಸದರಿಯವರು ಮೃತಪಡುವುದಕ್ಕಿಂತ ಎಷ್ಟು ವರ್ಷಗಳ ಮೊದಲಿನಿಂದ ಕ್ಯಾನ್ಸರ್ ಕಾಯಿಲೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಅನಾರೋಗ್ಯವಿದ್ದ ಕಾರಣ ಅವರು ಮನೆಯಿಂದ ಅಪರೂಪಕ್ಕೆ ಹೊರಬರುತ್ತಿದ್ದರು. ನನಗೆ ಜಗದೀಶ ಚವಡಿಯವರ ಪರಿಚಯವಿರುತ್ತದೆ. ನಮ್ಮ ಮನೆ ಅಣ್ಣಿಗೇರಿಯ ಹೊಸಪೇಟೆ ಓಣಿಯಲ್ಲಿ ಬರುತ್ತದೆ. ಜಗದೀಶ ರವರ ಮನೆ ಹುಡೇದ ಬೈಲ್ ನಲ್ಲಿ ಬರುತ್ತದೆ. ಸದರಿಯವರ ಸ್ವಂತ ಊರು ಯಾವುದೆಂದು ನನಗೆ ಗೊತ್ತಿಲ್ಲ. ನಿಪಿ-27 ರ ಹೆಬ್ಬಟ್ಟಿನ ಗುರುತುಗಳಿರುವ ಸ್ಥಳದಲ್ಲಿ ಬರೆಯಲಾದ ಕೈ ಬರಹ ಯಾರದು ಎಂದು ಹೇಳಲಾಗುವುದಿಲ್ಲ. ಸದರಿ ದಾಖಲೆಯನ್ನು ಉಗರಗೋಳ ಎನ್ನುವವರು ಗಣಕೀಕೃತ ಮಾಡಿರುತ್ತಾರೆ. ಸದರಿ ದಾಖಲೆಯಲ್ಲಿ ಉಗರಗೋಳ ರವರು ಎಷ್ಟು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಚೆನ್ನಬಸಪ್ಪ ರವರು ತಿಳಿಸಿದ ಮೇರೆಗೆ ನಾನು ನಿಪಿ-27 ಕ್ಕೆ ಸಹಿ ಮಾಡಿರುತ್ತೇನೆ. ನಾನು ಹೋಗುವ ವೇಳೆ ನಿಪಿ-27 ನ್ನು ತಯಾರಿಸಲಾಗಿತ್ತು. ನನ್ನನ್ನೂ ಹೊರತು ಪಡಿಸಿ ನನ್ನ ಜೊತೆ ಜಗದೀಶ ಚವಡಿಯವರು, ಚೆನ್ನಬಸಪ್ಪ ಹಾಗೂ ವಾದಿ ನಿಂಗವ್ವ ರವರು ಹಾಜರಿದ್ದರು. ಚೆನ್ನಬಸಪ್ಪವರು ನನ್ನನ್ನು ಕರೆಯಲು ಬಂದಾಗ ಅವರಿಗೆ ಅನಾರೋಗ್ಯವಾಗಿತ್ತು. ನಿಪಿ-27 ನ್ನು ಅದರ ದಸ್ತುರ ಓದಿ ಹೇಳಿದ ಬಳಿಕ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಚೆನ್ನಬಸಪ್ಪ ರವರಿಗೆ ಇದ್ದ ಅನಾರೋಗ್ಯದ ಕುರಿತು ನಮೂದು ಇರುವುದಿಲ್ಲ. ಸದರಿ ದಾಖಲೆ ತಯಾರಿಸುವ ವೇಳೆ 1 ರಿಂದ 6 ನೇ ಪ್ರತಿವಾದಿಯರು ನೋಂದಣಾಧಿಕಾರಿಗಳ ಕಚೇರಿಗೆ ಬಂದಿದ್ದರಾ ಎಂದರೆ ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಜೊತೆ ಹಾಜರಿದ್ದ ಜಗದೀಶ ರವರು ವಾದಿಯ ಗಂಡನ ಸಂಬಂಧಿಕ ಎಂದರೆ ಸರಿ. ನಾನು ಚೆನ್ನಬಸಪ್ಪ ಕರೆದ ಮೇರೆಗೆ ನಿಪಿ-27 ಕ್ಕೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಮಾಹಿತಿ ಇರದಿದ್ದರೂ ಸಹ ವಾದಿಗೆ ಸಹಾಯ ವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೊತೆ ಜಗದೀಶ ರವರು ಹಾಜರಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆನ್ನಬಸಪ್ಪರವರಿಗೆ ಕ್ಯಾನ್ಸರ್ ಇದ್ದ ಕಾರಣ ಅವರಿಗೆ ಸರಿಯಾಗಿ ಕಿವಿ ಕೇಳುತ್ತಿರಲಿಲ್ಲ, ನಡೆದಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. 1

ರಿಂದ 4 ನೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಖೊಟ್ಟಿಯಾಗಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎಸ್ ಐ ಎ ವಕೀಲರಿಂದಃ**

ಚೆನ್ನಬಸಪ್ಪ ರವರಿಗೆ 5 ಮತ್ತು 6 ನೇ ಪ್ರತಿವಾದಿಯರು ಮಕ್ಕಳಿದ್ದಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**